**<u>ಸಾಕ್ಷಿಯನ್ನು ದಿನಾಂಕ 09-11-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲು: ವಾದಿಯರ ಪರ ಶ್ರೀ ಬಿ.ಎಸ್. ವಕೀಲರಿಂದ:</u>**

ನನ್ನ ಗಂಡ ಈರಪ್ಪ ಅನಾರೋಗ್ಯದಿಂದ ತೀರಿಕೊಂಡಿದ್ದರು. ನನ್ನ ಗಂಡ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು ಸೂಚಿಸಿದರೆ ಸಾಕ್ಷಿ ಅನಾರೋಗ್ಯದಿಂದ ತೀರಿಕೊಂಡಿದ್ದರು ಎನ್ನುತ್ತಾರೆ. ಯಾವ ರೀತಿ ಅನಾರೋಗ್ಯ ಇತ್ತು ಮತ್ತು ಎಷ್ಟು ದಿನಗಳಿಂದ ಅನಾರೋಗ್ಯವಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಜ್ವರ ಬಂದು ನೆತ್ತಿಗೆ ಹತ್ತಿ ಒಂದು ತಿಂಗಳು ಅನಾರೋಗ್ಯವಾಗಿತ್ತು ಎನ್ನುತ್ತಾರೆ. ನನ್ನ ಮಗ ಭೀಮಶಾ ಕಳ್ಳತನ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ಮತ್ತು ಅದರಿಂದ ಮನನೊಂದು ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದ ಎನ್ನುವುದು ಸುಳ್ಳು.

ಚಾಂಗಲೇರದಲ್ಲಿ ನನ್ನ ತವರು ಮನೆ ಇದೆ. ಕನಕಪೂರ ಯಾರ ಊರು ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ತಂದೆ ನಾವು ಚಿಕ್ಕವರಿದ್ದಾಗಲೆ ತೀರಿಕೊಂಡರು ಆದ್ದರಿಂದ ಕನಕಪೂರದಲ್ಲಿ ನಮ್ಮ ಸೋದರ ಮಾವ ನಮ್ಮನ್ನು ನೋಡಿಕೊಂಡು ನಂತರ ನನ್ನನ್ನು ಚಾಂಗಲೇರಾಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ ಎನ್ನುತ್ತಾರೆ.

ದಾವಾ ಸ್ವತ್ತುಗಳ ಖಾತೆಗಳು 1 ಮತ್ತು 3 ನೇ ಪ್ರತಿವಾದಿಯರು ಹಾಗೂ ನನ್ನ ಗಂಡನ ಹೆಸರಿಗೆ ಹೇಗೆ ಬದಲಾವಣೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲೆಗಳು ಈಗ ನನ್ನ ಹೆಸರಿಗೆ ಇದೆ. ಸದರಿ ದಾಖಲೆಗಳು ನಿಮ್ಮ ಹೆಸರಿಗೆ ಯಾವ ಆಧಾರದಲ್ಲಿ ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಗಂಡ ಬದುಕಿದ್ದಾಗ ದಾವಾ ಸ್ವತ್ತನ್ನು ನಾವು ಖರೀದಿ ಮಾಡಿದ್ದೆವು ಹಾಗಾಗಿ ಅದರ ದಾಖಲೆ ನಮ್ಮ ಹೆಸರಿಗೆ ಇದೆ ಎನ್ನುತ್ತಾರೆ. ನನ್ನ ಗಂಡ ಬದುಕಿದ್ದಾಗ ದಾವಾ ಸ್ವತ್ತನ್ನು ನಾವು ಖರೀದಿ ಮಾಡಿದ್ದೆವು ಎಂಬುದನ್ನು ತೋರಿಸಲು ಮತ್ತು ಸದರಿ ಖರೀದಿ ಪ್ರಕಾರವೇ ದಾಖಲೆಗಳು ನಮ್ಮ ಹೆಸರಿಗೆ ಬದಲಾವಣೆ ಆಗಿದೆ ಎಂಬುದನ್ನು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಖರೀದಿ ಪತ್ರ ಎಷ್ಟು ವರ್ಷದ ಹಿಂದೆ ಆಗಿತ್ತು ಎಂದು ಪ್ರಶ್ನಿಸಿದರೆ ಸಾಕ್ಷಿ 35 ವರ್ಷದ ಹಿಂದೆ ಆಗಿತ್ತು ಎನ್ನುತ್ತಾರೆ. 35 ವರ್ಷದ ಹಿಂದೆ ನಾನು 14-15 ವರ್ಷದ ಬಾಲಕಿ ಆಗಿದ್ದೆ ಎಂದರೆ ಸಾಕ್ಷಿ ನನ್ನ ಗಂಡ ಬದುಕಿದ್ದಾಗ ಖರೀದಿ ಮಾಡಿದ್ದೆವು ಎನ್ನುತ್ತಾರೆ. 35 ವರ್ಷಗಳ ಹಿಂದೆ 2 ನೇ ವಾದಿಗೆ 2-3 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾಬಾಲಕನಾಗಿದ್ದ 2 ನೇ ವಾದಿ ಯಾವುದೇ

ದಾಖಲೆಗಳಿಗೆ 35 ವರ್ಷಗಳ ಹಿಂದೆ ಸಹಿ ಮಾಡಲು ಬರುತ್ತಿರಲಿಲ್ಲ ಹಾಗಾಗಿ ಆತ ಯಾವುದೇ ಖರೀದಿ ಪತ್ರ ಬರೆದುಕೊಟ್ಟಿಲ್ಲ ಎಂದು ಸೂಚಿಸಿದರೆ ಸಾಕ್ಷಿ ಆತನೇ ಖರೀದಿ ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದಾನೆ ಎನ್ನುತ್ತಾರೆ.

ನಾನು ಹೇಳುವಂತೆ 1 ನೇ ವಾದಿಯ ಗಂಡ ದಾವಾ ಸ್ವತ್ತನ್ನು ನನ್ನ ಗಂಡ ಬದುಕಿದ್ದಾಗ ಆತನಿಗಾಗಲಿ ಅಥವಾ 1 ಮತ್ತು 3 ನೇ ಪ್ರತಿವಾದಿಯರಿಗಾಗಲಿ ದಾವಾ ಸ್ವತ್ತನ್ನು ಮಾರಾಟ ಮಾಡಿಲ್ಲ ಹಾಗಾಗಿ ಯಾವುದೇ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗಿಲ್ಲ ಎನ್ನುವುದು ಸರಿಯಲ್ಲ.

ತಮ್ಮ ಹಿರಿಯರ ಆಸ್ತಿಗಳನ್ನು ನನ್ನ ಮಾವ 1 ನೇ ಪ್ರತಿವಾದಿ ಮತ್ತು ಆತನ ಸಹೋದರ ಹಾಗೂ 1 ನೇ ವಾದಿಯ ಗಂಡ ಬಕ್ಕಪ್ಪ ಇಬ್ಬರು ತಮ್ಮ ಜೀವತಾವಧಿಯಲ್ಲಿ ಹಂಚಿಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನಮ್ಮ ಹಿರಿಯರಿಗೆ ಗೊತ್ತು ಎನ್ನುತ್ತಾರೆ. ಪಾಲು ವಿಭಾಗದ ಪ್ರಕಾರ 1 ನೇ ಪ್ರತಿವಾದಿ ಮತ್ತು ಬಕ್ಕಪ್ಪನ ಹೆಸರಿಗೆ ಕಂದಾಯದ ದಾಖಲೆಗಳು ಬದಲಾವಣೆ ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಯಾವುದೇ ಕ್ರಯ ಪತ್ರ ಇಲ್ಲದೆ ದಾವಾ ಸ್ವತ್ತಿನ ಕಂದಾಯದ ದಾಖಲೆಗಳು ಮತ್ತು ಪಂಚಾಯತಿ ದಾಖಲೆಗಳನ್ನು ನನ್ನ ಮಾವ 1 ನೇ ಪ್ರತಿವಾದಿ, ನನ್ನ ಭಾವ 3 ನೇ ಪ್ರತಿವಾದಿ ಮತ್ತು ನನ್ನ ಗಂಡ ಈರಪ್ಪ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಮಾವ, ನನ್ನ ಗಂಡ ಮತ್ತು ಭಾವ ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದರು ಎನ್ನುತ್ತಾರೆ.

ವಾದಿಯರು ತುಮಕುಂಟಾ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಬಕ್ಕಪ್ಪ ಬದುಕಿದ್ದಾಗ ಅದೇ ಗ್ರಾಮದಲ್ಲಿ ವಾಸವಿದ್ದ ಎಂದರೆ ಸರಿ. ಬಕ್ಕಪ್ಪ ತನ್ನ ಹೆಂಡತಿ ಮಕ್ಕಳೊಂದಿಗೆ ತುಮಕುಂಟಾ ಗ್ರಾಮಕ್ಕೆ ಬಂದು ವಾಸವಿದ್ದಾಗ ನನ್ನ ಮಾವ, ಗಂಡ ಮತ್ತು ಭಾವಂದಿರು ಆತನಿಗೆ ಗೊತ್ತಾಗದಂತೆ ಆತನಿಗೆ ಸೇರಿದ ದಾವಾ ಸ್ವತ್ತುಗಳನ್ನು ಕಬ್ಜೆ ಮಾಡಿಕೊಂಡು ಅದರ ದಾಖಲೆಗಳನ್ನು ಅವರ ಹೆಸರಿಗೆ ಮಾಡಿಸಿಕೊಂಡಿದ್ದರು ಎನ್ನುವುದು ಸರಿಯಲ್ಲ. ಬಕ್ಕಪ್ಪ ಈಗ ತೀರಿಕೊಂಡಿದ್ದಾರೆ ಎಂದರೆ ಸರಿ. ಬಕ್ಕಪ್ಪ ಅಪಘಾತದಲ್ಲಿ ತೀರಿಕೊಂಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆತನ ಶವವನ್ನು ತಿರುಮಲಾಪೂರ ಗ್ರಾಮದಲ್ಲಿ ಆತನ ಪಾಲಿಗೆ ಬಂದಿದ್ದ ಜಮೀನಿನಲ್ಲೆ ಸಂಸ್ಕಾರ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಶವ ಸಂಸ್ಕಾರ ಮಾಡಲು ಬಕ್ಕಪ್ಪನಿಗೆ ಜಾಗ ಇಲ್ಲದೆ ಇದ್ದದಿದ್ದರಿಂದ ನಾವೇ ಜಾಗ ಕೊಟ್ಟಿದ್ದೇವೆ ಎನ್ನುತ್ತಾರೆ. ಬಕ್ಕಪ್ಪನಿಗೆ ತನ್ನ ಶವ ಸಂಸ್ಕಾರ ಮಾಡುವಷ್ಟು ಜಾಗ ಇರಲಿಲ್ಲ ಎಂದು ನನ್ನ

ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ.

ವಾದಿಯರು ತುಮಕುಂಟಾ ಗ್ರಾಮದಲ್ಲಿ ಕಳೆದ 30-35 ವರ್ಷಗಳಿಂದ ವಾಸವಿದ್ದಾರೆ ಎಂದರೆ ಸರಿ. 2015 ನೇ ಇಸವಿಯಲ್ಲಿ ದಾವಾ ಸ್ವತ್ತಿನ ದಾಖಲೆಗಳನ್ನು ನನ್ನ ಗಂಡನ ಹೆಸರಿಗೆ ಬದಲಾವಣೆ ಮಾಡಿಸಿಕೊಳ್ಳುವಾಗ ತಿರುಮಲಾಪೂರ ಗ್ರಾಮದ ವ್ಯಾಪ್ತಿಯಲ್ಲಿ ಪಂಚಾಯತಿಯಿಂದ ನೋಟಿಸು ಕೊಡಿಸಿದ್ದೆವು ಆದರೆ ತುಮಕುಂಟಾ ಗ್ರಾಮದಲ್ಲಿ ಆ ಬಗ್ಗೆ ನೋಟಿಸು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ವಾದಿಯರ ಒಪ್ಪಿಗೆ ಮೇರೆಗೆ ನನ್ನ ಗಂಡನ ಹೆಸರಿಗೆ ಪಂಚಾಯತಿ ದಾಖಲೆಗಳು ಬದಲಾವಣೆ ಆಗಿದ್ದವು ಎನ್ನುತ್ತಾರೆ. ವಾದಿಯರು ಸಮ್ಮತಿ ಕೊಟ್ಟ ಬಗ್ಗೆ ಪಂಚಾಯತಿ ದಾಖಲೆಗಳಲ್ಲಿ ನಮೂದಿಲ್ಲ ಎಂದರೆ ಸಾಕ್ಷಿ ಅವರ ಸಮ್ಮತಿ ಮೇರೆಗೆ ದಾಖಲೆಗಳು ಬದಲಾವಣೆ ಆಗಿದೆ ಎನ್ನುತ್ತಾರೆ. ವಾದಿಯರು ಯಾವುದೇ ಸಮ್ಮತಿ ಕೊಟ್ಟಿಲ್ಲ ಹಾಗಾಗಿ ಸದರಿ ವಿಚಾರವನ್ನು ನಮ್ಮ ಪ್ರತಿವಾದ ಪತ್ರ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ಬಕ್ಕಪ್ಪ ತೀರಿಕೊಂಡ ನಂತರ ದಾವಾ ಸ್ವತ್ತಿನ ಮನೆಯ ದಾಖಲೆಗಳನ್ನು ನನ್ನ ಗಂಡನ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಬಕ್ಕಪ್ಪ ಬದುಕಿದ್ದಾಗಲೆ ದಾಖಲೆ ಮಾಡಿಸಲಾಗಿದೆ ಎನ್ನುತ್ತಾರೆ.

ದಾವಾ ಹೊಲಗಳು ಮತ್ತು ಮನೆಗೆ ಸಂಬಂಧಪಟ್ಟಂತೆ ನನಗಾಗಲಿ ಅಥವಾ ಇತರೇ ಪ್ರತಿವಾದಿಯರಿಗಾಗಲಿ ಯಾವುದೇ ರೀತಿ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಕಂದಾಯ ಮತ್ತು ಪಂಚಾಯತಿ ದಾಖಲೆಗಳನ್ನು ಕಂದಾಯ ಮತ್ತು ಪಂಚಾಯತಿ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ಕಾನೂನುಬಾಹಿರವಾಗಿ ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೂ ಸಹ ಕಂದಾಯ ಮತ್ತು ಪಂಚಾಯತಿ ದಾಖಲೆಗಳನ್ನು ನಾನು ಮತ್ತು ಇತರೇ ಪ್ರತಿವಾದಿಯರು ಸೃಷ್ಠಿ ಮಾಡಿಕೊಂಡಿರುವ ವಿಷಯ ಗೊತ್ತಾದ ನಂತರ ವಾದಿಯರು ಈ ದಾವೆ ಸಲ್ಲಿಸಿದ್ದಾರೆ ಎನ್ನುವುದು ಸರಿಯಲ್ಲ. ವಾದಿಯರೇ ದಾವಾ ಸ್ವತ್ತಿಗಳ ಮಾಲೀಕರು ಮತ್ತು ಕಬ್ಜೆದಾರರು ಎಂದು ಸೂಚಿಸಿದರೆ ಸಾಕ್ಷಿ ನಾವೇ ದಾವಾ ಸ್ವತ್ತುಗಳಲ್ಲಿ ಸ್ವಾಧೀನವಿದ್ದು ಅದರ ಮಾಲೀಕರಾಗಿದ್ದೇವೆ ಎನ್ನುತ್ತಾರೆ.

ದಾವಾ ಹೊಲಗಳ ಕಂದಾಯ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು ಅದರ ಆಧಾರದಲ್ಲಿ ನಾವು ಬ್ಯಾಂಕ್ ಸಾಲ ಪಡೆದುಕೊಂಡಿರುವುದರಿಂದ ಸದರಿ ಸಾಲಕ್ಕೂ ವಾದಿಯರಿಗೂ ಸಂಬಂಧ ಇಲ್ಲ ಎಂದು

ಸೂಚಿಸಿದರೆ ಸಾಕ್ಷಿ ವಾದಿಯರ ಒಪ್ಪಿಗೆ ಮೇರೆಗೆ ಕಂದಾಯ ದಾಖಲೆಗಳು ನಮ್ಮ ಹೆಸರಿಗೆ ಬದಲಾವಣೆ ಆಗಿದೆ ಎನ್ನುತ್ತಾರೆ. ದಾವಾ ಹೊಲಗಳಲ್ಲಿ ನಾವೇ ಬೊರವೆಲ್ ಕೊರೆಸಿದ್ದೇವೆ ಎಂಬುದನ್ನು ತೋರಿಸುವ ದಾಖಲೆಗಳು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಕಳೆದ 35 ವರ್ಷಗಳಿಂದ ನಾವೇ ಕಬ್ಜೆಯಲ್ಲಿದ್ದೇವೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಎನ್ನುವುದು ಸರಿಯಲ್ಲ. ಮೂಲತಃ ಬಕ್ಕಪ್ಪನಿಗೆ ಸಂಬಂಧಪಟ್ಟ ದಾವಾ ಸ್ವತ್ತುಗಳು ಆತನ ಮರಣದ ನಂತರ ವಾದಿಯರಿಗೆ ಬಂದಿದ್ದು ಅವರೇ ಸದರಿ ಸ್ವತ್ತುಗಳ ಮಾಲೀಕರು ಮತ್ತು ಕಬ್ಜೆದಾರರು ಎಂದು ನನಗೆ ಮತ್ತು ಇತರೇ ಪ್ರತಿವಾದಿಯರಿಗೆ ಗೊತ್ತಿದ್ದರು ಸಹ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾದಿಯರೇ ದಾವಾ ಸ್ವತ್ತುಗಳ ದಾಖಲೆಗಳ ಬದಲಾವಣೆಗೆ ಒಪ್ಪಿಗೆ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**